# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 309 |
| ಸದಸ್ಯರ ಹೆಸರು | : | ಶ್ರೀ ಗೋವಿಂದರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ: | : | 15.12.2021 |
| ಉತ್ತರಿಸುವ ಸಚಿವರು | | ಮಾನ್ಯ ಪಶುಸಂಗೋಪನಾ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಗೋ ಹತ್ಯೆ ನಿಯಂತ್ರಣ ಕಾಯ್ದೆ ಜಾರಿಗೆ ಬಂದ ನಂತರ, ಕಾಯ್ದೆ ಪ್ರಕಾರ ಪ್ರತಿ ಜಿಲ್ಲೆಯಲ್ಲಿ ಎಷ್ಟು ಸರ್ಕಾರಿ ಗೋಶಾಲೆಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗಿದೆ; | ರಾಜ್ಯದಲ್ಲಿ ಗೋ ಹತ್ಯೆ ನಿಯಂತ್ರಣ ಕಾಯ್ದೆ ಜಾರಿಗೆ ಬಂದ ನಂತರ, ಪ್ರತಿ ಜಿಲ್ಲೆಯಲ್ಲಿ ಒಂದು ಸರ್ಕಾರಿ ಗೋಶಾಲೆಯನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗಿದೆ. |
| ಆ) | ಕ್ರಮ ಕೈಗೊಂಡಿದ್ದಲ್ಲಿ, ಪ್ರತಿ ಜಿಲ್ಲೆಗೆ ಎಷ್ಟು ಎಕರೆ ಜಮೀನನ್ನು ನಿಗದಿಪಡಿಸಲಾಗಿದೆ; (ಜಿಲ್ಲಾವಾರು, ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು) | ಮಾಹಿತಿಯನ್ನು <u>ಅನುಬಂಧ-1</u> ರಲ್ಲಿ ನೀಡಲಾಗಿದೆ. |
| ಇ) | ಪ್ರಸ್ತುತ ಇರುವ ಖಾಸಗಿ ಗೋಶಾಲೆಗಳಲ್ಲಿ ಜಾಗವಿಲ್ಲದೇ ಹಸುಗಳಿಗೆ ಆಶ್ರಯ ನೀಡಲು ಸಾಧ್ಯವಾಗದ ಪರಿಸ್ಥಿತಿ ಎದುರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ | ಖಾಸಗಿ ಗೋಶಾಲೆಗಳಲ್ಲಿ ಜಾಗವಿಲ್ಲದೇ ಹಸುಗಳಿಗೆ ಆಶ್ರಯ ನೀಡದಿರುವ ಕುರಿತು ಯಾವುದೇ ವರದಿಗಳು ಬಂದಿರುವುದಿಲ್ಲ.<br>ಖಾಸಗಿ ಗೋಶಾಲೆಗಳಲ್ಲಿ ಜಾನುವಾರುಗಳ ಸಾಕಾಣಿಕೆಯ ಒತ್ತಡವನ್ನು ಕಡಿಮೆ ಮಾಡಲು ಸರ್ಕಾರದಿಂದ ಪ್ರತಿ ಜಿಲ್ಲೆಗೆ ಒಂದು ಗೋಶಾಲೆಯನ್ನು ಪ್ರಾರಂಭಿಸುವ ಪ್ರಕ್ರಿಯೆ ಚಾಲನೆಯಲ್ಲಿದೆ. ಅಲ್ಲದೇ ಖಾಸಗಿ ಗೋಶಾಲೆಗಳನ್ನು ತೆರೆಯುವವರಿಗೆ ಸರ್ಕಾರ ಪ್ರೋತ್ಸಾಹಿಸುತ್ತಿದೆ. |
| ಈ) | ಸರ್ಕಾರದಿಂದ ಗೋಶಾಲೆ ತೆರೆಯಲು ಪ್ರತಿ ಗೋಶಾಲೆಗೆ ಎಷ್ಟು ಅನುದಾನವನ್ನು ನಿಗದಿಪಡಿಸಲಾಗಿದೆ. | ಸರ್ಕಾರದಿಂದ ಪ್ರತಿ ಜಿಲ್ಲೆಗೆ ಒಂದು ಗೋಶಾಲೆಯನ್ನು ತೆರೆಯಲು, ಪ್ರತಿ ಗೋಶಾಲೆಗೆ ರೂ.50.00 ಲಕ್ಷ ಅನುದಾನ ನಿಗದಿಪಡಿಸಲಾಗಿದೆ. |
| ಉ) | ಖಾಸಗಿ ಗೋಶಾಲೆಗಳಿಗೆ ರಕ್ಷಿಸಿದ ಹಸುಗಳ ನಿರ್ವಹಣೆಗೆ ಅನುದಾನದ ಕೊರತೆ ಎದುರಾಗಿರುವುದು, ಸರ್ಕಾರದ ಗಮನಕ್ಕೆ ಬಂದಿದಯೇ; | ಪ್ರಸ್ತುತ ಖಾಸಗಿ ಗೋ ಶಾಲೆಗಳಲ್ಲಿ ನಿರ್ವಹಿಸಲಾಗುತ್ತಿರುವ ಜಾನುವಾರುಗಳ ಸಂಖ್ಯೆಗನುಗುಣವಾಗಿ ಅವುಗಳ ನಿರ್ವಹಣೆಗೆ ತೊಂದರೆ ಆಗದಂತೆ ಇಲಾಖೆಯಲ್ಲಿ ಲಭ್ಯವಿರುವ ಅನುದಾನವನ್ನು |

--2

| | | |
|---|---|---|
| | | ನೀಡಲಾಗುತ್ತಿದೆ. 2021-22ನೇ ಸಾಲಿನಲ್ಲಿ ಖಾಸಗಿ ಗೋಶಾಲೆಗಳಿಗೆ ಅನುದಾನ ಬಿಡುಗಡೆ ಮಾಡಲು ನವೆಂಬರ್-2021ರ ವರೆಗೆ ಜಿಲ್ಲಾ ಪ್ರಾಣಿ ದಯಾ ಸಂಘಗಳಿಂದ ಶಿಫಾರಸ್ಸುಗೊಂಡು ಸಲ್ಲಿಸಲಾಗಿರುವ ಒಟ್ಟು 139 ಗೋಶಾಲೆಗಳಿಗೆ ರೂ.2,79,41,587-00 ಅನುದಾನ ನೀಡಲಾಗಿದೆ. |
| ಊ) | ಕೋಲಾರ ಜಿಲ್ಲೆಯಲ್ಲಿ ಇದುವರೆಗೂ ಸರ್ಕಾರಿ ಗೋಶಾಲೆಗಳ ನಿರ್ಮಾಣಕ್ಕಾಗಿ ಭೂಸ್ವಾಧೀನ ಪ್ರಕ್ರಿಯೆ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಕೋಲಾರ ಜಿಲ್ಲೆಯಲ್ಲಿ ಸರ್ಕಾರಿ ಗೋಶಾಲೆಗಳ ನಿರ್ಮಾಣಕ್ಕಾಗಿ ಕೆ.ಜಿ.ಎಫ್ ತಾಲ್ಲೂಕು, ಬೇತಮಂಗಲ ಹೋಬಳಿ, ವೆಂಕಟಾಪುರ ಗ್ರಾಮದ ಸ.ನಂ.67ರಲ್ಲಿ 9.36 ಎಕರೆ ಜಮೀನು ಪಶುಪಾಲನಾ ಇಲಾಖೆಯ ಹೆಸರಿಗೆ ಕಾಯ್ದಿರಿಸಿ ಜಿಲ್ಲಾಧಿಕಾರಿ, ಕೋಲಾರರವರು ದಿನಾಂಕ 6-11-2021 ರಂದು ಆದೇಶ ಹೊರಡಿಸಿರುತ್ತಾರೆ. |
| ಋ) | ಬಂದಿದ್ದರೇ, ಭೂಸ್ವಾಧೀನಕ್ಕೆ ಯಾವ ಕ್ರಮ ಕೈಗೊಳ್ಳಲಾಗಿದೆ ? | ಸದರಿ ಜಮೀನು ಇಲಾಖೆಯ ಸುಪರ್ದಿಗೆ ಪಡೆಯುವ ಪ್ರಕ್ರಿಯೆ ಚಾಲನೆಯಲ್ಲಿದೆ. |

**ಸಂ: ಪಸಂಮೀ ಇ-310 ಸಲೆವಿ 2021**

(ಪ್ರಭು. ಬಿ ಚವ್ಹಾಣ್)
ಪಶುಸಂಗೋಪನೆ ಸಚಿವರು

# ಅನುಬಂಧ-I

## ಸರ್ಕಾರಿ ಗೋಶಾಲೆ ನಿರ್ಮಿಸಲು 19 ಜಿಲ್ಲೆಗಳ ಸ್ಥಳ ಗುರುತಿಸಲಾಗಿದ್ದು, ಇದರ ಮಾಹಿತಿ

| ಕ್ರ. ಸಂ | ಜಿಲ್ಲೆಗಳು | ಸರ್ಕಾರಿ ಗೋಶಾಲೆ ಜಮೀನಿನ ವಿವರ | ಎಕರೆ |
|---|---|---|---|
| 1 | ಬೆಂಗಳೂರು ನಗರ | ಹೆಸರಘಟ್ಟದ ಹೋಬಳಿ ,ದಾಸೇನಹಳ್ಳಿ, ಸರ್ವೆ.ನ.36 ರಲ್ಲಿ ಲಭ್ಯವಿರುವ 50 ಎಕರೆ ಜಮೀನಲ್ಲಿ 25 ಎಕರೆ ಹಂಚಿಕೆ ಮಾಡಲಾಗಿದೆ. | 25.00 |
| 2 | ಬೆಂಗಳೂರು ಗ್ರಾ. | ನೆಲಮಂಗಲ ತಾಲ್ಲೂಕು, ತ್ಯಾಮಗೊಂಡ್ಲು ಹೋಬಳಿ, ಕೊಡಿಗೇಹಳ್ಳಿ 10 ಎಕರೆ ಸರ್ಕಾರಿ ಜಮೀನನ್ನು ಹಂಚಿಕೆ ಮಾಡಲಾಗಿದೆ. | 10.00 |
| 3 | ತುಮಕೂರು | ಶಿರಾ ತಾಲ್ಲೂಕಿನಲ್ಲಿ ಹುಲಕುಂಟೆ ಹೋಬಳಿ, ಚಿಕ್ಕಬಾಣಗೇರೆ ಗ್ರಾಮದ ಸ.ನ.204 ರಲ್ಲಿ 9.2 ಎಕರೆ ಸರ್ಕಾರಿ ಜಮೀನನ್ನು ಹಂಚಿಕೆ ಮಾಡಲಾಗಿದೆ. RTC ಪಡೆಯಲಾಗಿದೆ. | 9.20 |
| 4 | ಚಿಕ್ಕಬಳ್ಳಾಪುರ | ನಾಗಿರೆಡ್ಡಿಹಳ್ಳಿ,ಭುಶಟ್ಟಹಳ್ಳಿ ಹೋಬಳಿ,ಶಿಡ್ಲಘಟ್ಟ ತಾಲುಕು.ಸ.ನ.41 ರಲ್ಲಿ 9.38ಎಕರೆ. | 9.38 |
| 5. | ಹಾಸನ | ಅರಸೀಕೆರೆ ತಾಲುಕು ಹಬ್ಬನಗಟ್ಟ ಕಾವಲು,ಬೋರನಕೊಪ್ಪಲು,ಸ,ನ.2/70 ರಲ್ಲಿ 20-25 ಎಕರೆ. | 25.00 |
| 6. | ಬಾಗಲಕೋಟೆ | ಬಾಗಲಕೋಟೆ ತಾಲುಕು ಶೀಗಿಕೇರಿ ಗ್ರಾಮ, ಸ.ನ.100/100/2ರ ಕ್ಷೇತ್ರದ 12.30 ಎಕರೆಯಲ್ಲಿ 9.20. | 9.20 |
| 7. | ಮೈಸೂರು | ವರುಣ ಹೋಬಳಿ, ಆಯರ ಹಳ್ಳಿ,ಮೈಸೂರು ಸ.ನ.212 ರಲ್ಲಿ 10ಎಕರೆ. | 10.00 |
| 8. | ಚಿಕ್ಕಮಗಳೂರು | ಕಡೂರು ತಾಲುಕು, ಎಮ್ಮೆದೊಡ್ಡಿ ಭಾಗದಲ್ಲಿ ಇಲಾಖೆಯ ಅಧೀನದಲ್ಲಿರುವ ಗೋಸದನದ ಜಾಗ ಸ,ನ.70 ರಲ್ಲಿ ,11ಎಕರೆ. | 11.00 |
| 9. | ದಕ್ಷಿಣ ಕನ್ನಡ | ಕಡಬ ತಾಲುಕು,ರಾಮಕುಂಜ ಗ್ರಾಮ, ಜಾನುವಾರು ಸಂವರ್ದನಾ ಮತ್ತು ತರಬೇತಿ ಕೇಂದ್ರ,ಕೊಯ್ಲ ಕ್ಷೇತ್ರ ಸ.ನ.233,299/1,2,3 ಒಟ್ಟು 98.45 ಎಕರೆ | 98.45 |
| 10 | ರಾಯಚೂರು | ರಾಯಚೂರು ತಾಲುಕು ಯರಗೇರಾ ಹೋಬಳಿ, ಜಂಬಲದಿನ್ನಿ ಗ್ರಾಮ,ಸ.ನ. 138/ಎ,ರಲ್ಲಿ 6.00ಎಕರೆ. | 6.00 |
| 11. | ಹಾವೇರಿ | ಗುತ್ತಲ ಕುರಿ ಸಂವರ್ದನಾ ಕೇಂದ್ರುದ ಸ.ನ. 371 -374 ರಲ್ಲಿ 25 ಎಕರೆ | 25.00 |
| 12. | ಗದಗ | ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ವಿಶ್ವ ವಿದ್ಯಾಲಯದ ಆವರಣದಲ್ಲಿ ಪಿಪಿಪಿ ಮಾದರಿಯಲ್ಲಿ ಹಟ್ಟಿ ಗ್ರಾಮ,ಸ.ನ.179 | 10.00 |
| 13. | ಬಳ್ಳಾರಿ | ವಿಜಯ ನಗರ ಜಿಲ್ಲೆ ಹಗರಿಬೊಮ್ಮನಹಳ್ಳಿ, ತಾಲುಕು,ವರ್ಲಹಳ್ಳಿ ಗ್ರಾಮದ ಸ.ನ. 39 ರಲ್ಲಿ 10.52 ಎಕರೆ ಪೈಕಿ9.88 ಎಕರೆ | 9.88 |
| 14. | ಕೊಪ್ಪಳ | ಯಲಭುರ್ಗಾ ತಾಲುಕು,ಭೇವೂರ ಗ್ರಾಮ, ಗಾಯರಾಣ ಸ.ನ.151 ರಲ್ಲಿ 10.00 ಎಕರೆ | 10.00 |
| 15. | ದಾವಣಗೆರೆ | ಹೊಸಹಳ್ಳಿ, ಗ್ರಾಮ, ಆನೆಗೋಡು ಹೋಬಳಿ, ದಾವಣಗೆರೆ ತಾಲ್ಲೂಕು. ಸ.ನ.35 ರಲ್ಲಿ 7.00ಎಕರೆ | 7.00 |
| 16. | ಚಾಮರಾಜನಗರ | ಬೆಮಹಳ್ಳಿ, ಚಾಮರಾಜನಗರ ತಾಲ್ಲೂಕು 9.00 ಎಕರೆ | 9.00 |
| 17 | ಚಿತ್ರದುರ್ಗ | ಕುರಡಿಹಳ್ಳಿ ಗ್ರಾಮ, ಕಸಬಾ ಹೋಬಳಿ, ಚೆಳ್ಳಕೆರೆ ತಾಲ್ಲೂಕು, ಸ.ನ.27 ರಲ್ಲಿ 9.36 ಎಕರೆ | 9.36 |

| | | | |
|---|---|---|---|
| 18. | ಬೀದರ್ | ಬಸಂತಪೂರ ಗ್ರಾಮದ ಸರ್ಕಾರಿ ಗಾಯರಾಣ ಭೂಮಿ ಸ,ನ.93 ರಲ್ಲಿ 39.08 ಎಕರೆ | 39.08(ಅಧೀನ ಕಾರ್ಯದರ್ಶಿಗಳು ಕಂದಾಯ ಇಲಾಖೆ,ಭೂ ಮಂಜುರಾತಿ-3,ಇವರಿಂದ ಪೂರ್ವಾನುಮೋದನೆ ನೀಡಿದ್ದಾರೆ.) |
| 19. | ರಾಮನಗರ | ವಂದಾರಗುಪ್ಪೆ ಗ್ರಾಮ, ಚೆನ್ನಪಟ್ಟಣ ತಾಲ್ಲೂಕು.ಸ.ನ.20 ರಲ್ಲಿ 8.00ಎಕರೆ ಜಮೀನು | ಜಿಲ್ಲಾಧಿಕಾರಿಗಳು 8.00ಎಕರೆ ಜಮೀನನ್ನು ಗೋಶಾಲೆಗಾಗಿ ಕಾಯ್ದಿರಿಸಲು ಆದೇಶ ನೀಡಿರುತ್ತಾರೆ. |

**ಸರ್ಕಾರಿ ಗೋಶಾಲೆ ನಿರ್ಮಿಸಲು ಜಿಲ್ಲೆಗಳಲ್ಲಿ ಸ್ಥಳ ಗುರುತಿಸುವ ಪ್ರಕ್ರಿಯೆ ಕುರಿತು. (11 ಜಿಲ್ಲೆಯ ಪ್ರಕ್ರಿಯೆ ಕಂದಾಯ ಇಲಾಖೆಯಲ್ಲಿ ಇರುತ್ತದೆ.)**

| ಕ್ರ. ಸಂ. | ಜಿಲ್ಲೆಗಳು | ಸರ್ಕಾರಿ ಗೋಶಾಲೆ ಜಮೀನಿನ ವಿವರ | ಎಕರೆ | ಷರಾ |
|---|---|---|---|---|
| 1.. | ಶಿವಮೊಗ್ಗ | ನಗರ ಸಭೆ ವ್ಯಾಪ್ತಿಯ ರಾಗಿಗುಡ್ಡ, ಕಸಬಾ ಹೋಬಳಿ ಸ.ನ.76 ರಲ್ಲಿ 5.00ಎಕರೆ | **5.00** | ಜಮೀನಿನ ಮಂಜೂರಾತಿಯ ಕಡತ AC ಕಛೇರಿಯಲ್ಲಿರುತ್ತದೆ. |
| 2. | ಮಂಡ್ಯ | ಮದ್ದೂರು ತಾಲ್ಲೂಕು ಚಿಕ್ಕ ಅಂಕನ ಹಳ್ಳೀ ಗ್ರಾಮ ಸ.ನ.804/6ರಲ್ಲಿ 10.00 ಎಕರೆ | **10.00** | ಕಡತ ತಹಶೀಲ್ದಾರ್ ಮದ್ದೂರು ತಾಲ್ಲೂಕು ರವರ ಕಛೇರಿಯಲ್ಲಿರುತ್ತದೆ. |
| 3. | ಉಡುಪಿ | ಹೆಬ್ರಿ ತಾಲ್ಲೂಕು, ಕೆರೆಬೆಟ್ಟು ಗ್ರಾಮ, ಸ.ನ.79/2 ರಲ್ಲಿ 13.24 ಎಕರೆ | **13.24** | ಕಡತ ಕಂದಾಯ ಇಲಾಖೆಯಲ್ಲಿದೆ. |
| 4 | ಕೊಡಗು | ಮಡಿಕೇರಿ ತಾಲ್ಲೂಕು, ನಿಡುಗಣೆ ಗ್ರಾಮ, ಸ.ನ.22/1 ರಲ್ಲಿ20.84 ಎಕರೆ | **20.84** | ಜಮೀನಿನ ಮಂಜೂರಾತಿಗಾಗಿ ಕಡತ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿರುತ್ತದೆ. ಸ್ಥಳ ಪರಿಶೀಲನೆ ಮಾಡುವುದಾಗಿ ಜಿಲ್ಲಾಧಿಕಾರಿಗಳು ತಿಳಿಸಿರುತ್ತಾರೆ. |
| 5 | ಬೆಳಗಾವಿ | ಹುಕ್ಕೇರಿ ತಾಲ್ಲೂಕು ಬೆಳವಿ ಗ್ರಾಮ, ಸ.ನ.645 ರಲ್ಲಿ 19.04 ಎಕರೆ | **19.04** | ಜಿಲ್ಲಾಧಿಕಾರಿಗಳು ಪ್ರಧಾನ ಕಾರ್ಯದರ್ಶಿಗಳು ಕಂದಾಯ ಇಲಾಖೆ ಇವರಿಗೆ ಭೂಮಿ ಮಂಜೂರಾತಿಗಾಗಿ ದಿ:08-11-21ರಂದು ಪತ್ರ ಸಲ್ಲಿಸಿರುತ್ತಾರೆ. |
| 6. | ಉತ್ತರ ಕನ್ನಡ | ದುಸಗಿ ಗ್ರಾಮ, ಹಳಿಯಾಳ ತಾಲ್ಲೂಕು ಸ.ನ.173 ರಲ್ಲಿ 20.00ಎಕರೆ | **20.00** | ಜಿಲ್ಲಾಧಿಕಾರಿಗಳ ತಂಡ ಮೂಲಭೂತ ಕೆಲಸಗಳ ನಿರ್ಮಾಣಕ್ಕೆ ಭೂಮಿ ವೀಕ್ಷಣೆ ಮಾಡಿರುತ್ತಾರೆ ಮತ್ತು ಕಡತ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಇರುತ್ತದೆ. |
| 7. | ಧಾರವಾಡ | ಮದನಬಾವಿ ಗ್ರಾಮ, ತೇಗೂರು ಹತ್ತಿರ, ಸ.ನ.214 ರಲ್ಲಿ 10.00 ಎಕರೆ. | **10.00** | ದಿ:16-11-21 ರಂದು ಜಿಲ್ಲಾಧಿಕಾರಿಗಳ ತಂಡ ಸ್ಥಳ ಪರಿಶೀಲನೆ ಮಾಡಿ, ಮೂಲಭೂತ ಕಾರ್ಯಗಳನ್ನು ಪ್ರಾರಂಭ ಮಾಡಲು ಸೂಚಿಸಿರುತ್ತಾರೆ. |
| 8. | ವಿಜಯಪುರ | ವಿಜಯಪುರ ತಾಲ್ಲೂಕು, ಭೂತನಾಳ ಗ್ರಾಮ, ಸ.ನ.217 ರಲ್ಲಿ 10.26 ಎಕರೆ | **10.26** | ಜಮೀನು ಹಸ್ತಾಂತರಿಸುವ ಪ್ರಕ್ರಿಯೆ ಕುರಿತಂತೆ ಜಿಲ್ಲಾಧಿಕಾರಿಗಳು ಪೂರ್ವಾನುಮೋದನೆಗಾಗಿ ಪ್ರದಾನ ಕಾರ್ಯದರ್ಶಿಗಳು ಕಂದಾಯ ಇಲಾಖೆ ಇವರಿಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಆಯುಕ್ತರು, ನಗರ ಸಭೆ ರವರ ತಂಡ ಮೂಲಭೂತ ಕಾರ್ಯಗಳ ಕುರಿತು ವೀಕ್ಷಿಸಿದ್ದಾರೆ. |
| 9. | ಕಲಬುರಗಿ | ಕಲಬುರಗಿ ತಾಲ್ಲೂಕು, ಮಿಣಜಿಗಿ ಗ್ರಾಮ ಸ.ನ.23 ರಲ್ಲಿ 56 ಎಕರೆಯಲ್ಲಿ (25 ಎಕರೆ ) | **25.00** | ಕಡತ ತಹಶೀಲ್ದಾರ್, ಕಲಬುರಗಿ ರವರ ಕಛೇರಿಯಲ್ಲಿರುತ್ತದೆ. |
| 10. | ಯಾದಗಿರಿ | ಬೇಣಚಿಗಡ್ಡಿ ಗ್ರಾಮ, ಹುಣಸಗಿ ತಾಲ್ಲೂಕು ಸ.ನ.28 ರಲ್ಲಿ 10.00 ಎಕರೆ. | **10.00** | ಕಡತವು ಜಿಲ್ಲಾಧಿಕಾರಿಗಳ ಕಛೇರಿಯ ಹಂತದಲ್ಲಿರುತ್ತದೆ. |
| 11. | ಕೋಲಾರ | ಗುಟ್ಟಹಳ್ಳಿ /ಬಂಗಾರ ತಿರುಪತಿ ಗ್ರಾಮ,ಕೆ.ಜಿ.ಎಫ್. ತಾಲ್ಲೂಕು .ಸ.ನ.59 ರಲ್ಲಿ 19.60 ಎಕರೆ | **19.60** | ಜಮೀನು ಹಸ್ತಾಂತರಿಸುವ ಪ್ರಕ್ರಿಯೆ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಅಂತಿಮ ಹಂತದಲ್ಲಿರುತ್ತದೆ. |